ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ ★ ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

'ಉತ್ಕೃಷ್ಟತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ಊಟಿರಸ್ತೆ, ಮೈಸೂರು-570 025, ಕರ್ನಾಟಕ

☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ: 22.07.2016

**ಪ್ರಕಟಣೆ ಕೃಪೆಗಾಗಿ**

## ಸಮಸ್ಯೆಗಳಿಗೆ ಪರಿಹಾರ ನಿಮ್ಮಲ್ಲೇ ಇದೇ

– ಶ್ರೀಮತಿ ಮಂಜುಳಾ ಮಾನಸ

21 ನೇ ಶತಮಾನದಲ್ಲಿ ಲಿಂಗಾಧಾರಿತ ಸಾಮಾಜಿಕ ಪಿಡುಗುಗಳು ಮಿತಿಮೀರುತ್ತಿರುವುದು ಅತಿಯಾಗಿ ಕಂಡುಬರುತ್ತಿದೆ. ಅದರಲ್ಲೂ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ಮತ್ತು ಅವುಗಳ ಪರಿಣಾಮ ಸಾಮಾಜಿಕ ಸಂಸ್ಥೆಗಳಾದ ಕುಟುಂಬ, ವಿವಾಹಾದಿಗಳನ್ನು ಬುಡಸಹಿತ ಅಲ್ಲಾಡಿಸುತ್ತಿದೆ. ಇಂತಹ ಸಂದರ್ಭದಲ್ಲಿ ಹೆಣ್ಣುಮಕ್ಕಳ ಆಂತರಿಕ ಸಬಲೀಕರಣ, ಪರಿಸ್ಥಿತಿಗಳ ಗ್ರಹಿಕೆ ಮತ್ತು ನಿರ್ವಹಣೆ ಇವೇ ಮುಂತಾದ ಕೌಶಲ್ಯಗಳನ್ನು ಸಬಲಗೊಳಿಸಲು ಮೈಸೂರು ನಗರದ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನ ಮಹಿಳಾ ಘಟಕವು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜನ್ಮ ಶತಮಾನೋತ್ಸವ ಮತ್ತು ಕಾಲೇಜಿನ ಸುವರ್ಣ ಮಹೋತ್ಸವದ ಪ್ರಯುಕ್ತ ದಿನಾಂಕ:22.07.2016 ರ ಶುಕ್ರವಾರದಂದು 21 ನೇ ಶತಮಾನದ ಸಾಮಾಜಿಕ ಸವಾಲುಗಳು- ಯುವತಿಯರ ಸಬಲೀಕರಣ ಎಂಬ ವಿಷಯಾಧಾರಿತ ಒಂದು ದಿನದ ಕಾರ್ಯಗಾರವನ್ನು ಹಮ್ಮಿಕೊಂಡಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಶ್ರೀಮತಿ ಮಂಜುಳಾ ಮಾನಸರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ವಯಸ್ಸಿನ ಮಾನದಂಡವನ್ನು ಮೀರಿದ ದೌರ್ಜನ್ಯವನ್ನು ಇಂದು ಮಹಿಳೆಯರು ಅನುಭವಿಸುತ್ತಿದ್ದಾರೆ. ಇಂದಿನ ಜೀವನ ಶೈಲಿಯೂ ಸಹ ಈ ರೀತಿಯ ದೌರ್ಜನ್ಯಗಳಿಗೆ ಕಾರಣವಾಗುತ್ತಿದೆ. ಇದರ ತಡೆಯುವಿಕೆಗೆ ಹೆಣ್ಣುಮಕ್ಕಳ ಕೌಶಲ್ಯ ಹೆಚ್ಚಾಗುವಂತಹ ಕೆಲಸ ಸಂಸ್ದೆಗಳಿಂದ ಹೆಚ್ಚಾಗಿ ಆಗಬೇಕಿದೆ. ತಾಂತ್ರಿಕ ಅಭಿವೃದ್ಧಿಯು ಸಹ ಹೆಣ್ಣು ಮಕ್ಕಳನ್ನು ಲೈಂಗಿಕ ದೌರ್ಜನ್ಯಕ್ಕೆ ಈಡುಮಾಡುತ್ತಿದ್ದು ಅವರು ಮಾನಸಿಕ ಖಿನ್ನತೆಗೆ ಒಳಗಾಗುತ್ತಿದ್ದಾರೆಂದು ಅಭಿಪ್ರಾಯಪಟ್ಟರು. ಮತ್ತೊಂದೆಡೆ ಸಣ್ಣ ಸಮಸ್ಯೆಗಳನ್ನೂ ಹಿರಿದಾಗಿ ಗ್ರಹಿಸುತ್ತಿರುವ ಹೆಣ್ಣುಮಕ್ಕಳು ಅದರ ಪರಿಹಾರೋಪಾಯ ತಿಳಿಯದೆ ಸಮಸ್ಯೆಯ ಸುಳಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದಾರೆ. ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಮತ್ತು ನಿಭಾಯಿಸುವ ನಿಟ್ಟಿನಲ್ಲಿ ಹೆಣ್ಣುಮಕ್ಕಳಿಗೆ ಪೂರಕವಾದ ವಾತಾವರಣವನ್ನು ನಿರ್ಮಾಣಮಾಡುವ ಅವಶ್ಯಕತೆ ಹೆಚ್ಚಾಗಿ ಕಂಡುಬರುತ್ತಿದೆ ಎಂದು ಅಭಿಪ್ರಾಯಪಟ್ಟರು. ಅಲ್ಲದೇ ಹೆಣ್ಣಮಕ್ಕಳು ಮೊದಲು ಮಾನಸಿಕವಾಗಿ ಬಲವಾಗಬೇಕು ಅನಂತರ ಭೌತಿಕವಾಗಿ ಬಲವಾಗಬೇಕೆಂದರು.

ಈ ಕಾರ್ಯಗಾರವನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ ವಿ ಸಾಂಬಶಿವಯ್ಯನವರು ಉದ್ಘಾಟಿಸಿ ಮಾತನಾಡುತ್ತಾ ಯುವತಿಯರ ಈ ರೀತಿಯ ಆಂತರಿಕ ಸಶಕ್ತೀಕರಣ ಪ್ರಸ್ತುತ ಸಮಾಜದ ಅತಿ ಅವಶ್ಯಕ ಅಂಶವಾಗಿದ್ದು ಸಾಮಾಜಿಕ ಜವಾಬ್ದಾರಿಯಿರುವ ಯಾವುದೇ ಕಾಲೇಜು ಅಥವಾ ಸಂಘಸಂಸ್ಥೆಗಳು ಈ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಅವಶ್ಯಕತೆ ಇದೆ ಎಂದು ತಿಳಿಸುತ್ತಾ, ಕಾಲೇಜಿನ ಮಹಿಳಾ ಘಟಕವು ಈ ನಿಟ್ಟಿನಲ್ಲಿ ಮುಂದುವರೆದಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮೈಸೂರು ಮಹಾನಗರ ಪಾಲಿಕೆಯ ಸದಸ್ಯರಾದ ಶ್ರೀಮತಿ ರತ್ನಮ್ಮ ಶಾಂತವೀರೇಂದ್ರಸ್ವಾಮಿ ಯವರು ಮಾತನಾಡುತ್ತಾ, ಇಂತಹ ಕಾರ್ಯಕ್ರಮಗಳ ಉದ್ದೇಶ ಮಹಿಳೆಯರ ಪ್ರಸ್ತುತ ಸಮಸ್ಯೆಗಳನ್ನು ಎದುರಿಸಲು ಧೈರ್ಯ, ತಾಳ್ಮೆ ಮತ್ತು ಮನಸ್ಥೈರ್ಯಗಳನ್ನು ತುಂಬುವುದು. ದೇಶ ಕಾಯುವವರು ಸೇನೆಯವರಾದರೆ, ಸಂಸ್ಕೃತಿಯನ್ನು ಕಾಯುವವರು ಮಹಿಳೆಯರು. ಸಂಸ್ಕೃತಿಯನ್ನು ಬಿಟ್ಟು ಬದುಕಲು ಭಾರತದಂತಹ ದೇಶದಲ್ಲಿ ಸಾಧ್ಯವಿಲ್ಲದಿರುವುದರಿಂದ ತಮ್ಮ ಸುತ್ತಲಿರುವ ಯುವತಿಯರನ್ನು ಸಬಲೀಕರಣಗೊಳಿಸಬೇಕೆಂದು ಕರೆ ನೀಡಿದರು.

ಕು. ಕೀರ್ತನಾ ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಪ್ರೊ ಎಂ ಮಹದೇವಪ್ಪನವರು ಸ್ವಾಗತಿಸಿದರು. ಸುವರ್ಣಮಹೋತ್ಸವ ಸಮಿತಿ ಸಂಚಾಯಲಕರಾದ ಪ್ರೊ ಡಿ ಎಸ್ ಸದಾಶಿವಮೂರ್ತಿಯವರು ವಂದಿಸಿದರು. ಮಹಿಳಾ ಘಟಕದ ಸಂಚಾಲಕರಾದ ಶ್ರೀಮತಿ ಟಿ ವಿ ಲತಾ ರವರು ಉಪಸ್ತಿತರಿದ್ದ ಕಾರ್ಯಕ್ರಮದಲ್ಲಿ ಕಾರ್ಯಗಾರದ ಸಂಪನ್ಮೂಲ ವ್ಯಕ್ತಿಗಳಾದ ಡಾ. ಕುಮುದಿನಿ ಅಚ್ಚಿ ಯವರು ನಾಲ್ಕು ಘೋಷ್ಠಿಗಳಲ್ಲಿ ಸಶಕ್ತೀಕರಣಕ್ಕೆ ಸಂಬಂಧಿಸಿದಂತೆ ವಿವಿಧ ವಿಷಯಗಳನ್ನು ಕುರಿತು ಕಾರ್ಯಾಗಾರವನ್ನು ನಡೆಸಿಕೊಟ್ಟರು.

ಪ್ರಾಂಶುಪಾಲರು

(ಪ್ರೊ ಎಂ ಮಹದೇವಪ್ಪ)

ಪ್ರಾಂಶುಪಾಲರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು-570 025.

ಗೆ

ಸಂಪಾದಕರು

--------------

--------------

ಮೈಸೂರು